ಬಾರೋ ಗುರು ರಾಘವೇಂದ್ರ ಬಾರಯ್ಯಾ ಬಾ ಬಾ

ಹಿಂದುಮುಂದಿಲ್ಲೆನಗೆ ನೀನೇ ಗತಿ

ಎಂದು ನಂಬೀದೆ ನಿನ್ನ ಪಾದವ

ಬಂಧನವ ಬಿಡಿಸೆನ್ನ ಕರಪಿಡಿ

ನಂದಕಂದ ಮುಕುಂದ ಬಂಧೋ ।ಅಪ।

ಸೇವಕನೇಲೋ ನಾನು ಧಾವಿಸಿ ಬಂದೆನೋ

ಸೇವೇಯ ನೀಡೋ ನೀನು

ಸೇವಕನ ಸೇವೆಯನು ಸೇವಿಸಿ

ಸೇವ್ಯ ಸೇವಕ ಭಾವವೀಯುತ

ಠಾವು ಗಾಣಿಸಿ ಪೊರೆಯೊ ಧರೆಯೊಳು

ಪಾವನಾತ್ಮಕ ಕಾಯುವ ಕರುಣಿ ॥೧॥

ಕರೆದರೇ ಬರುವಿಯೆಂದು ಸಾರುವುದು ಡಂಗುರ

ತ್ವರಿತದಿ ಬಂದೊದಗೋ ಬಂದು

ಜರಿಯಬೇಡವೊ ಬರಿದೆ ನಿಮ್ಮಯ

ವಿರಹ ತಾಳದೆ ಮನದಿ ಕೊರಗುವೆ

ಹರಿಯ ಸ್ಮರಣೆಯ ನಿರುತದಲಿ ಏನ

ಹರುಷದಲಿ ನೀನಿರುತ ಕೊಡುತಲಿ ॥೨॥

www.yousigma.com

ನರಹರಿ ಪ್ರಿಯನೆ ಬಾ ಗುರುಶೇಷವಿಠಲನ
ಕರುಣ ಪಾತ್ರನೆ ಬೇಗ ಬಾ
ಗುರುವರನೆ ಪರಿಪೋಷಿಸೆನ್ನನು
ಮರೆಯದಲೆ ತವಚರಣ ಕೋಟೀಯ
ಲಿರಿಸಿ ಚರಣಾಂಬುಜವ ತೋರುತ
ತ್ವರಿತದಲಿ ಓಡೋಡಿ ಬಾ ಬಾ ॥೩॥

www.yousigma.com